ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಮೇಲಿನಂತೆ ಈಗಾಗಲೇ ಮಂಗಳೂರು ತಾಲ್ಲೂಕ್ ಪಂಚಾಯಿತಿಗೆ ಬಿಡುಗಡೆ ಮಾಡಲಾಗಿದೆ.

3. ಮಂಗಳೂರು ತಾಲ್ಲೂಕು ಪಂಚಾಯಿತಿಗೆ ಬಿಡುಗಡೆ ಮಾಡಬೇಕಾದ ಹೆಚ್ಚುವರಿ ಮುದ್ರಾಂಕ ಶುಲ್ಕ ಬಾಕಿ ಇರುವುದಿಲ್ಲ.

ಮುಜರಾಯಿ ದೇವಾಲಯಗಳ ಅಭಿವೃದ್ಧಿ

164 (516) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ) ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಪುರಾತನ ಕಾಲದ ಅನೇಕ ಶಿಥಿಲಗೊಂಡಿರುವ ದೇವಾಲಯಗಳಿದ್ದು ಪ್ರತಿ ವರ್ಷ 2 ಅಥವಾ 3 ದೇವಾಲಯಗಳಿಗೆ ಮಾತ್ರ ಅನುದಾನ ನೀಡಿ ಕಟ್ಟಡಗಳ ಪುನರ್ ನವೀಕರಣ ಕಾರ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿರುವ ಎಲ್ಲಾ ದೇವಾಲಯಗಳಿಗೆ ಮುಜರಾಯಿ ಇಲಾಖೆಯಿಂದ ಹಣವನ್ನು ಬಿಡುಗಡೆಗೊಳಿಸಿ ಶಿಥಿಲ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ಸಚಿವರು)

1. ಹೌದು.

2. ಸ್ಥಳೀಯ ಭಕ್ತಾದಿಗಳು ಅಥವಾ ಸಾರ್ವಜನಿಕರು ಮುಂದೆ ಬಂದು ಅಂದಾಜು ಪಟ್ಟಿ ತಯಾರಿಸಿ ಶೇ. 50 ರಷ್ಟು ಸಾರ್ವಜನಿಕ ವಂತಿಗೆ ಭರಿಸಿ ನಿಯಮಾನುಸಾರ ಅನುದಾನ ಹಂಚಿಕೆ ಮಾಡುವ ಬಗ್ಗೆ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿದ್ದಲ್ಲಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಲಭ್ಯತೆಯನುಗುಣವಾಗಿ ಹಂಚಿಕೆ ಮಾಡಲು ಪರಿಶೀಲಿಸಲಾಗುವುದು.

ಮುಳಗು ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಮಾರ್ಪಾಡು

165(645) ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಜಾಲ್ಸೂರು-ಸುಬ್ರಹ್ಮಣ್ಯ ರಸ್ತೆಯ ಸೋಣಂಗೇರಿ ಮತ್ತು ಕೈಕುಳಿ ಎಂಬಲ್ಲಿ ಮುಳುಗು ಸೇತುವೆಗಳಿದ್ದು ಮಳೆಗಾಲದಲ್ಲಿ ವಿಪರೀತ ಮಳೆಯಿಂದಾಗಿ ಮಳೆ ನೀರು ಬಂದು ವಾಹನ ಸಂಚಾರ ಹಾಗೂ ಸಾರ್ವಜನಿಕರಿಗೆ ಓಡಾಡಲು ತುಂಬ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದಲ್ಲಿ, ಸದರಿ ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ಬಂದಿರುತ್ತದೆ.

ಆ. ಈ ಎರಡೂ ಸ್ಥಳಗಳಲ್ಲಿ ಸೇತುವೆ ನಿರ್ಮಿಸಲು ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತವಾಗಿರುತ್ತದೆ. ಈ ಕಾಮಗಾರಿಗಳಿಗೆ ಸಚಿವ ಸಂಪುಟ ಉಪ ಸಮಿತಿಯ ಮತ್ತು ನಬಾರ್ಡ್‌ನ ಅನುಮೋದನೆ ದೊರೆತಲ್ಲಿ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ.

ಸೂಳ್ಯ ತಾಲ್ಲೂಕಿನಲ್ಲಿ ರಸ್ತೆಗಳ ಡಾಂಬರೀಕರಣ

166(647) ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಜಾಲ್ಸೂರು-ಸುಬ್ರಹ್ಮಣ್ಯ, ಅರಿಯಡ್ಕ-ನಿಂತಿಕಲ್ಲು ರಸ್ತೆಗಳಲ್ಲಿ ಕಳಿದ ಹಲವಾರು ವರ್ಷಗಳ ಹಿಂದೆ ಡಾಂಬರೀಕರಣ ಮಾಡಲಾಗಿದ್ದು ಈಗ ಇದು ಹಾಳಾಗಿದ್ದು ರಸ್ತೆಗಳ ಎರಡು ಪಕ್ಕದ ದೊಡ್ಡ ಗುಂಡಿಗಳು ಬಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಸದರಿ ರಸ್ತೆಗಳಿಗೆ ಮರು ಡಾಂಬರೀಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದ್ದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ಈ ಎರಡೂ ರಸ್ತೆಗಳನ್ನು ಗುಂಡಿ ಮುಚ್ಚಿ ಲಭ್ಯವಿರುವ ಅನುದಾನದಲ್ಲಿ ವಾಹನ ಸಂಚಾರಕ್ಕೆ ಯೋಗ್ಯವಾದ ಸ್ಥಿತಿಯಲ್ಲಿ ಇಡಲಾಗಿದೆ.

ಆ. ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಯಲ್ಲಿ ಕಿಮೀ 7.00 ದಿಂದ ಕಿಮೀ 14.00 ವರೆಗೆ ಈಗಾಗಲೇ ಸುಧಾರಣೆ ಮಾಡಲಾಗಿದೆ. ಮುಂದುವರೆದು ನಿರ್ವಹಣೆ ಅನುದಾನದಲ್ಲಿಯ 0.87 ಕಿಮೀ ಮರು ಡಾಂಬರೀಕರಣ ಮಾಡಿದೆ. ಅರಿಯಡಕ-ನಿಂತಿಕಲ್ಲು ರಸ್ತೆಯಲ್ಲಿ ಕಿಮೀ 16.00 ದಿಂದ 23.60 ವರೆಗೆ ನಿರ್ವಹಣೆ ಅನುದಾನದಲ್ಲಿ ಸುಧಾರಣೆ ಕೆಲಸ ಪ್ರಗತಿಯಲ್ಲಿದೆ. ಮುಂದುವರಿದು 2000-01ರಲ್ಲಿ 0.60 ಕಿಮೀ ಮರುಡಾಂಬರೀಕರಣ ಮಾಡಿದೆ. ಈ ಎರಡು ಜಿಲ್ಲಾ ಮುಖ್ಯ ರಸ್ತೆಗಳ ಉಳಿದ ಭಾಗಗಳಿಗೆ ಕೂಡ ಮರು ಡಾಂಬರೀಕರಣ ಮಾಡುವ ಕುರಿತು ಪರಿಶೀಲಿಸಲಾಗುವುದು.

ಮುಳುಗು ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಪರಿವರ್ತಿಸುವುದು

167(650) ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸುಬ್ರಹ್ಮಣ್ಯ-ಕೈಕಂಬ-ಗುಂಡ್ಯ ರಸ್ತೆಯ ಕುಮಾರಧಾರ ಎಂಬಲ್ಲಿ ಮುಳುಗು ಸೇತುವೆ ಇದ್ದು, ಸದರಿ ಸೇತುವೆಯನ್ನು ಸರ್ವಋತು ಸೇತುವೆಯನ್ನಾ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದ್ದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ಈ ವಿಷಯದಲ್ಲಿ ಸದ್ಯಕ್ಕೆ ಯಾವುದೇ ಇಂತಹ ಖಚಿತ ಯೋಜನೆ ಇರುವುದಿಲ್ಲ. ಸೂಕ್ತ ಕಾಲಕ್ಕೆ ಈ ಯೋಜನೆ ಕುರಿತು ಪರಿಗಣಿಸಲಾಗುವುದು.